SL. No. : OP

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 95-K** **Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 16. 06. 2017 ] [ Date : 16. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ರಷ್ಯಾದ ಜನತೆಯ ಮೇಲೆ ತಮ್ಮ ಸಿದ್ಧಾಂತದಿಂದ ಪ್ರಭಾವ ಬೀರಿದ ವ್ಯಕ್ತಿ

   (A) ಸ್ಟ್ಯಾಲಿನ್

   (B) ಕಾರ್ಲ್ ಮಾರ್ಕ್ಸ್

   (C) ರೂಸ್ಸೊ

   (D) ಲೆನಿನ್

2. 1950 ರ ಯೋಜನಾ ನೀತಿಯ ಮುಖ್ಯ ಗುರಿ

   (A) ಜನಸಂಖ್ಯೆ ನಿಯಂತ್ರಣ

   (B) ಅನಕ್ಷರತೆ ನಿರ್ಮೂಲನೆ

   (C) ಆರ್ಥಿಕ ಅಸಮತೋಲನ ಕಡಿಮೆ ಮಾಡುವುದು

   (D) ಖಾಸಗೀಕರಣವನ್ನು ಪ್ರೋತ್ಸಾಹಿಸುವುದು

3. ಜೈನ ಧರ್ಮದ ಸ್ಥಾಪಕ

   (A) ಮಹಾವೀರ

   (B) ಗೌತಮ ಬುದ್ಧ

   (C) ಬಸವಣ್ಣ

   (D) ಗುರು ನಾನಕ್

4. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದ ಲೇಖಕ

   (A) ಜಿ.ಎಸ್. ಗುರ್ರೆ

   (B) ಗಾಂಧೀಜಿ

   (C) ನೆಹರೂ

   (D) ದಯಾನಂದ ಸರಸ್ವತಿ

5. 'ಕ್ಯಾಸ್ಟ್' ಎನ್ನುವ ಪದ ಪೋರ್ಚುಗೀಸ್ ಮತ್ತು ಸ್ಪ್ಯಾನಿಸ್ ಭಾಷೆಯ ಈ ಪದದಿಂದ ಬಂದಿದೆ

(A) ಪ್ರಾಂತ್ಯ

(B) ಕ್ಯಾಸ್ಟಾ

(C) ಕಮ್ಯೂನಿಟಿ

(D) ಜಾತಿ

6. ಚಂಪಾರಣ್ಯ ಸತ್ಯಾಗ್ರಹದ ನೇತೃತ್ವ ವಹಿಸಿದವರು

(A) ಮಹಾತ್ಮ ಗಾಂಧಿ

(B) ಬಾಲ ಗಂಗಾಂಧರ ತಿಲಕ್

(C) ನೆಹರೂ

(D) ಲಾಲ್ ಬಹುದ್ದೂರ್ ಶಾಸ್ತ್ರಿ

7. ಪ್ರಾರ್ಥನಾ ಸಮಾಜ ಸ್ಥಾಪನೆಯಾದ ವರ್ಷ

(A) 1867

(B) 1928

(C) 1857

(D) 1942

8. ಹೋಂ ರೂಲ್ ಚಳುವಳಿಯನ್ನು ಭಾರತದಲ್ಲಿ ಆರಂಭಿಸಿದವರು

(A) ಸರೋಜಿನಿ ನಾಯ್ಡು

(B) ವಿಜಯಲಕ್ಷ್ಮೀ ಪಂಡಿತ್

(C) ದುರ್ಗಾ ಬಾಯಿ

(D) ಆ್ಯನಿ ಬೆಸೆಂಟ್

9. ಆದಿವಾಸಿಗಳನ್ನು 'ಹಿಂದುಳಿದ ಹಿಂದೂಗಳು' ಎಂದು ಕರೆದ ಸಮಾಜಶಾಸ್ತ್ರಜ್ಞ

(A) ಜಿ.ಎಸ್. ಗುರ್ರೆ

(B) ರಿವರ್ಸ್

(C) ಎಸ್.ಎಫ್. ನಾಡಲ್

(D) ಡಿ.ಎನ್. ಮಜುಂದಾರ್

10. 1962 ರಲ್ಲಿ ಭಾರತದ ಮೇಲೆ ಯುದ್ಧ ಮಾಡಿದ ರಾಷ್ಟ್ರ

(A) ಬಾಂಗ್ಲಾದೇಶ

(B) ಪಾಕಿಸ್ತಾನ

(C) ಚೀನಾ

(D) ಶ್ರೀಲಂಕಾ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಕೈಗಾರಿಕೀಕರಣ ಎಂದರೇನು ?

12. ಆಧುನೀಕರಣ ಎಂದರೇನು ?

13. ಪ್ರಾದೇಶಿಕ ಅಸಮತೋಲನ ಎಂದರೇನು ?

14. ಆರ್ಥಿಕ ಅಸಮತೋಲನ ಎಂದರೇನು ?

15. ವಲಸೆ ಹೆಚ್ಚಳಕ್ಕೆ ಕಾರಣವಾದ ಅಂಶ ಯಾವುದು ?

16. ಭಾರತದ ನವೋದಯದ ಪಿತಾಮಹ ಯಾರು ?

17. ಬಾರ್ಡೋಲಿ ಸತ್ಯಾಗ್ರಹದ ನೇತಾರ ಯಾರು ?

18. ಮಹಿಳಾ ಸಬಲೀಕರಣ ಎಂದರೇನು ?

19. ಸತಿ ಸಹಗಮನ ಪದ್ಧತಿ ಎಂದರೇನು ?

20. ಬೋಗಾರ್ಡಸ್‌ರವರ ಪ್ರಕಾರ ಬುಡಕಟ್ಟು ಸಮೂಹ ಎಂದರೇನು ?

21. 'ಸಿಲಿಕಾನ್ ಸಿಟಿ' ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ನಗರ ಯಾವುದು ?

22. 'ಕೇಸರಿ' ಎಂಬ ಪತ್ರಿಕೆಯನ್ನು ಆರಂಭಿಸಿದವರು ಯಾರು ?

23. ಭಾರತದಲ್ಲಿ 'ಹ್ಯಾಮ್ ರೇಡಿಯೋ'ಗಳು ಯಾವಾಗ ಜಾರಿಗೆ ಬಂದವು ?

24. 'ಮೂಕನಾಯಕ' ಎಂಬ ಪತ್ರಿಕೆಯನ್ನು ಯಾರು ಆರಂಭಿಸಿದರು ?

III. **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. ಆಧುನೀಕರಣವು ಸಾಮಾಜಿಕ ಬದಲಾವಣೆಗೆ ಹೇಗೆ ಸಹಕಾರಿಯಾಗಿದೆ ?

26. ಕೈಗಾರಿಕೀಕರಣದ ಪರಿಣಾಮಗಳೇನು ?

27. ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿದೆ. ಹೇಗೆ ?

28. ಸಾಮಾಜಿಕ ಬದಲಾವಣೆಗಿರುವ ಪ್ರಮುಖ ಅಡ್ಡಿ ಆತಂಕಗಳನ್ನು ತಿಳಿಸಿ.

29. ಆರ್ಥಿಕ ಅಸಮತೋಲನದ ಪರಿಣಾಮಗಳೇನು ?

30. ಪಕ್ಕಾ ಮತ್ತು ಕಚ್ಚಾ ಆಹಾರಗಳ ನಡುವಿನ ವ್ಯತ್ಯಾಸವೇನು ?

31. ಜಾತಿ ಪದ್ಧತಿ ನಿರ್ಮೂಲನೆ ಮಾಡಲು ಜಾರಿಗೆ ತರಲಾಗಿರುವ ಯಾವುದಾದರೂ ಎರಡು ಕಾಯಿದೆಗಳನ್ನು ತಿಳಿಸಿ.

32. ಜಾತಿ ಪದ್ಧತಿಯ ದುಷ್ಪರಿಣಾಮಗಳಾವುವು ?

33. ಸಾಮಾಜಿಕ ಚಳುವಳಿಗಳ ಲಕ್ಷಣಗಳೇನು ?

34. ಸಾಮಾಜಿಕ ಚಳುವಳಿಯ ಗುರಿಗಳೇನು ?

35. ಗ್ರಾಮೀಣ ಮಹಿಳೆಯರ ಪ್ರಮುಖ ಸಮಸ್ಯೆಗಳೇನು ?

36. ಭಾರತದ ಮುಸ್ಲಿಂ ಆಳ್ವಿಕೆಯಲ್ಲಿ ಮಹಿಳೆಯರ ಸ್ಥಾನಮಾನ ಹೇಗಿತ್ತು ?

37. ಭಾರತೀಯ ಬುಡಕಟ್ಟು ಜನಾಂಗಕ್ಕಿರುವ ವಿವಿಧ ಹೆಸರುಗಳಾವುವು ?

38. 1980 ರ ಬುಡಕಟ್ಟು ಉಪಯೋಜನೆಗಳ ಪ್ರಮುಖ ಉದ್ದೇಶಗಳೇನು ?

39. ಸಮೂಹ ಮಾಧ್ಯಮಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಸಾಮಾಜಿಕ ಬದಲಾವಣೆಯ ಲಕ್ಷಣಗಳೇನು ?

***ಅಥವಾ***

ಸಾಮಾಜಿಕ ಜೀವನದ ಮೇಲೆ ಔಪಚಾರಿಕ ಶಿಕ್ಷಣದ ಪರಿಣಾಮಗಳೇನು ?

41. ಇತ್ತೀಚಿನ ದಿನಗಳಲ್ಲಿ ಜಾತಿ ವ್ಯವಸ್ಥೆಯು ಹೆಚ್ಚು ಬದಲಾವಣೆ ಕಂಡಿದೆ. ಏಕೆ ?

***ಅಥವಾ***

ಜಾತಿ ಪದ್ಧತಿಯ ಉಗಮ ಮತ್ತು ಸ್ವರೂಪವನ್ನು ವಿವರಿಸಿ.

42. ಪ್ರತಿಭಟನಾತ್ಮಕ ಚಳುವಳಿಗಳ ಲಕ್ಷಣಗಳನ್ನು ತಿಳಿಸಿ.

***ಅಥವಾ***

ಸಾಮಾಜಿಕ ಚಳುವಳಿಯ ಯಾವುದಾದರೂ ಮೂರು ಉದ್ದೇಶಗಳನ್ನು ವಿವರಿಸಿ.

43. ಮಹಿಳೆಯರ ಸಮಾನತೆಗಾಗಿ ನಡೆದ ಸಮಾಜ ಸುಧಾರಣಾ ಚಳುವಳಿಗಳನ್ನು ಹೆಸರಿಸಿ.

***ಅಥವಾ***

ಮಹಿಳೆಯರ ಜಾಗೃತಿ ಹಾಗೂ ಪ್ರಗತಿಗಾಗಿ ಬ್ರಿಟಿಷರ ಕಾಲದಲ್ಲಿ ಮಹತ್ವದ ಪಾತ್ರವಹಿಸಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

44. ಬುಡಕಟ್ಟು ಜನಾಂಗಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿರುವ ಅಂಶಗಳಾವುವು ?

***ಅಥವಾ***

ಬುಡಕಟ್ಟು ಜನರ ಅಭಿವೃದ್ಧಿಯಲ್ಲಿ ನಿರೀಕ್ಷಿತ ಮಟ್ಟ ತಲುಪುವಲ್ಲಿ ಸರ್ಕಾರಗಳು ಏಕೆ ವಿಫಲವಾಗಿವೆ ?

45. ಜನರ ಜೀವನ ಶೈಲಿಯ ಮೇಲೆ ಸಮೂಹ ಮಾಧ್ಯಗಳು **ನಕಾರಾತ್ಮಕವಾದ** ಪ್ರಭಾವಬೀರಿವೆ. ಹೇಗೆ ?

***ಅಥವಾ***

ಜನರ ಜೀವನ ಶೈಲಿಯ ಮೇಲೆ ಸಮೂಹ ಮಾಧ್ಯಗಳು **ಸಕಾರಾತ್ಮಕವಾದ** ಪ್ರಭಾವಬೀರಿವೆ. ಹೇಗೆ ?

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ನಮ್ಮ ಸಂವಿಧಾನದ ಯಾವ ಅನುಚ್ಛೇದಗಳು ಬುಡಕಟ್ಟು ಸಮುದಾಯಗಳ ಕಲ್ಯಾಣದ ಬಗ್ಗೆ ತಿಳಿಸುತ್ತವೆ ?

47. ಭಾರತದಲ್ಲಿ ಮಹಿಳಾ ಸಬಲೀಕರಣವನ್ನು ಹೇಗೆ ಸಾಧಿಸಲಾಗಿದೆ ?